# 107

(I)

Total No. of Questions– **15**

Total No. of Printed Pages– **4** **Regd. No.** | | | | | | | | | | |

**Part II**

**KANNADA**

**Paper I**

**(Second Language)**

***Time : 3 Hours*** ***Max. Marks : 100***

**I.** ಈ ಕೆಳಗಿನ ಪದ್ಯಗಳಲ್ಲಿ ಯಾವುದಾದರೂ ಒಂದಕ್ಕೆ ಭಾವಾರ್ಥ ಬರೆಯಿರಿ : 1×6=6

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುಂದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹೆಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳಿದು ಪತ್ರದಿಂ ಕೊಡೆವಿಡುದು
ಸೆರಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು.

ಅಥವಾ

ಎಂದಿಗಯ್ಯ, ಎಂದಿಗೆ? ಎಂದಿಗೋ, ಎಂದಿಗೆ?
ನನ್ನ ನಾಡ ಮಂದಿಗೆ,
ತಿಳಿವು ಹೊಳೆವುದೆಂದಿಗೆ?
ನಾಡ ನೂರು ಕೋಟಿ ಗಂಡು ಹೆಣ್ಣು ಕೂಸು ಕುನ್ನಿಗೆ,
ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ?

**II.** ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ **20** ವಾಕ್ಯಗಳಲ್ಲಿ ಉತ್ತರಿಸಿ : 1×6=6

(1) 'ರನ್ನನ ದುರ್ಯೋಧನನು ಉತ್ತಮ ಗುಣಗಳ ಸಂಪತ್ತಿನ ನಿಧಿ' ಎನ್ನುವ ಮಾತನ್ನು ಪ್ರಸ್ತುತ ಪದ್ಯದ ಸನ್ನಿವೇಶಗಳಿಂದ ಸ್ಪಷ್ಟೀಕರಿಸಿರಿ.

(2) ಎಲ್ಲವನ್ನು ರಕ್ಷಿಸುವ ದೇವರು ನಮ್ಮನ್ನೂ ರಕ್ಷಿಸುತ್ತಾನೆ ಎಂಬುದನ್ನು ದಾಸರು ಹೇಗೆ ಹೇಳಿದ್ದಾರೆ?

**III.** ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ **20** ವಾಕ್ಯಗಳಲ್ಲಿ ಉತ್ತರಿಸಿ : 1×6=6

(1) ಡಾ. ಚೆನ್ನಣ್ಣ ವಾಲೀಕಾರರ ಶಾಲೆಯ ಅನುಭವ ಮತ್ತು ಶಾಲೆಯ ನಂತರದ ಅನುಬವಗಳು ಹೇಗಿದ್ದವು?

(2) ದುಷ್ಯಂತನನ್ನು ನಿರಾಕರಿಸಲು ಶಕುಂತಲೆ ಕೊಡುವ ಕಾರಣಗಳೇನು ತಿಳಿಸಿ.

**IV.** ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ **20** ವಾಕ್ಯಗಳಲ್ಲಿ ಉತ್ತರಿಸಿ : 1×6=6

(1) ಚಿನ್ನ ತೆಗೆದುಕೊಂಡು ಅನ್ನ ಕೊಡಿ ಎಂದ ಸೈತಾನನಿಗೆ ಶಿವಪುರದ ಜನರು ಹೇಗೆ ಪ್ರತಿಕ್ರಿಯಿಸಿದರು?

(2) ಬೋಲೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೇಗೆ ಪರಿಚಯಿಸುತ್ತಾರೆ?

**V.** ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. : 2×3=6

(1) ಇಳಿಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳು.

(2) ಅಳಿದ ಸಿರಿಯ ಅಣಕವಾಡು ಒಂದೆ ಸಮನೆ ನಡೆದಿದೆ.

(3) ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ

(4) ಗವಾಕ್ಷಿಯಿಂದ ಮಗನನ್ನು ಕೂಗಿರಬಹುದು.

**VI.** ಈ ಕೆಳಗಿನ ನಾಲ್ವರು ಕವಿ/ಲೇಖಕರಲ್ಲಿ ಇಬ್ಬರ ಪರಿಚಯ ಬರೆಯಿರಿ : 2×3=6

(1) ಕನಕದಾಸ.

(2) ಆರಿಫ್ ರಾಜಾ.

(3) ರನ್ನ.

(4) ನಾಗತಿಹಳ್ಳಿ ಚಂದ್ರಶೇಖರ.

**VII.** ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : 2×3=6

(1) ತನುಮನಧನಗಳನ್ನು ಮರೆಯಲು ಏನನ್ನು ತೋರುತ್ತಾರೆ?

(2) ಶಿವನ ಮೇಲೆ ಚೆನ್ನಯ್ಯನು ಮುನಿಸಿಕೊಳ್ಳಲು ಕಾರಣವೇನು?

(3) ಸೀತೆ ಸೌಮಿತ್ರಿಯನ್ನು ಹಿಂತಿರುಗಿ ಹೋಗೆಂದು ಏಕೆ ಹೇಳಿದಳು?

(4) ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು?

**VIII.** ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : 2×3=6

(1) ಅರಮನೆಗೆ ಯಾವ ಕಾರಣಕ್ಕಾಗಿ ಬಂದಿದ್ದೆನೆಂದು ಶಕುಂತಲೆ ಹೇಳುತ್ತಾಳೆ?

(2) ನಿರೂಪಕರ ಓರೆಕೋರೆಗಳನ್ನು ತಿದ್ದಿದ ಗುರುಗಳು ಯಾರ್‍ಯಾರು?

(3) ರಾಗಿಯಲ್ಲಿ ಯಾವ ರೋಗಗಳನ್ನು ತಡೆಯಬಲ್ಲ ಗುಣವಿದೆ?

(4) ಹುಡುಗನ ಯಾವ ಮಾತಿಗೆ ವೈದ್ಯಾಧಿಕಾರಿ ಬೆಪ್ಪಾಗಿ ಹೋದ?

**IX.** ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : 2×3=6

(1) ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?

(2) ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತದೆ?

(3) ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದೆ?

(4) ಬೋಳೇಶಂಕರನ ಸಹೋದರು ಯಾರು?

**X.** ಈ ಕೆಳಗಿನ ಎರಡರಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ. : 1×6=6

(1) ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ನೀಡುವಂತೆ ಕಾಲೇಜಿನ ಪ್ರಾಂಸುಪಾಲರಿಗೊಂದು ಪತ್ರ.

(2) ಪ್ರವಾಸದ ಅನುಭವಗಳನ್ನು ಕುರಿತು ಗೆಳೆಯ/ಗೆಳತಿಗೊಂದು ಪತ್ರ.

**XI.** **(A)** ಈ ಕೆಳಗಿನ ಎಂಟು ಸಂಧಿ ಪದಗಳಲ್ಲಿ ನಾಲ್ಕಕ್ಕೆ ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿ. 4×2=8

(1) ಹಗಲಿರುಳು.
(2) ಮದುವೆಯಾದ.
(3) ಬಿಸಿಲ್ಗುದುರೆ.
(4) ನ್ಯಾಯಾನ್ಯಾಯ.
(5) ಗಂಗೋದಕ.
(6) ಅತ್ಯುನ್ನತ.
(7) ದಿಗ್ವಿಜಯ.
(8) ಜಗನ್ಮಾತೆ.

**(B)** ಈ ಕೆಳಗಿನ ಆರು ಪದಗಳಲ್ಲಿ ಮೂರಕ್ಕೆ ಸಮಾಸ ಬಿಡಿಸಿ. ಸಮಾಸವನ್ನು ಹೆಸರಿಸಿ. 3×2=6

(1) ಆನೆಮರಿ.
(2) ಬೆನ್ನೀರು.
(3) ಆ ನಾಡು.
(4) ಮುಂಬಾಗಿಲು.
(5) ನರ ನಾರಾಯಣರು.
(6) ಸುಖಬಡು

**(C)** ಈ ಕೆಳಗಿನ ಎಂಟು ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ. 5×1=5

(1) ದರ್ಪಣ.
(2) ಹಲುಬು.
(3) ಪೇಟಕ.
(4) ಕಾವಳ.
(5) ಉಡಿ.
(6) ನಾಳಾಕೆ.
(7) ಕುಳ್ಳು.
(8) ಕರಂಡ.

**XII.** ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1×6=6

(1) ನೋಟು ಬದಲಾವಣೆಯ ಲಾಭ ನಷ್ಟಗಳು.
(2) ಅಂತರ್ಜಾಲ.
(3) ವಿದ್ಯಾರ್ಥಿ ಸಂಘಟನೆಗಳು.

**XIII.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 1×5=5

(1) ಅವ್ವನ ದೇಹದ ಮುಗುಳು ಯಾರು?

(2) ಎಲ್ಲರಿಗೂ ದಕ್ಕುವ ಹಣ್ಣು ಯಾವುದು?

(3) ನಾಡಿಗೆ ಯಾರ ಕಾಟ ಕೊನೆಗೊಂಡಿದೆ?

(4) ಯಾವ ತೆರದಿ ಸ್ವಾಮಿ ನಮ್ಮನ್ನು ಬಿಡದೆ ರಕ್ಷಿಸುವನು?

(5) ರಾವಣಾರಿ ಎಂದರೆ ಯಾರು?

**XIV.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 1×5=5

(1) 'ಗಾಂಧಿ' ಕಥೆಯನ್ನು ಯಾವ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ?

(2) ಗ್ರಾಮದ ಅಧಿದೇವತೆ ಯಾರು?

(3) ಜ್ಯೋತಿಷ್ಯದ ಉಗಮವು ಎಲ್ಲ ಕಂಡು ಬರುತ್ತದೆ?

(4) ಸೇಂಗಾ ಮಾರುವವನ ದಿನದ ಸಂಪಾದನೆ ಎಷ್ಟು?

(5) ಗೌತಮ ಬುದ್ಧನ ಶಿಷ್ಯನಾರು?

**XV.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 1×5=5

(1) ಸೋಮಾರಿಗಳ ಊಟ ಯಾವಾಗ?

(2) ಸೈತಾನ ಕಳುಹಿಸಿದ ಪಿಶಾಚಿಗಳೆಷ್ಟು?

(3) ಯಾವುದರಿಂದ ಕೆಲಸ ಮಾಡಬೇಕೆಂದು ಸೈತಾನ ಹೇಳುತ್ತಾನೆ?

(4) ಕತ್ತಲೆಯ ನಿಜ ಜನಕನು ಯಾರು?

(5) ಹಸಿರು ಸಾಮ್ರಾಜ್ಯದ ಪ್ರಜೆ ಯಾರು?